ತರಚಿದ ಮಂಡಿ, ಉಲ್ಲಾಸಕರ ಚೇತನಗಳು, ಗಮನಾರ್ಹ – ಆತ್ಮವಿಶ್ವಾಸ : ಉತ್ತರಾಖಂಡದ ಬಾಲಕಿಯರ ಶಾಲೆಯೊಂದು ಕಬಡ್ಡಿ ಚಾಂಪಿಯನ್‌ಗಳನ್ನು ಸೃಷ್ಟಿಸುವ ಪರಿ

ದುರ್ಗೇಶ್ ನಂದಿನಿ ಯಾದವ್

ಕನ್ಯಾ ಹಿರಿಯ ಪ್ರಾಥಮಿಕ ಶಾಲೆ, ಡಾಮ್ಟಾ
ನೌಗಾಂವ್‌ಬ್ಲಾಕ್, ಉತ್ತರಕಾಶಿ ಜಿಲ್ಲೆ, ಉತ್ತರಾಖಂಡ್

ಡಾಮ್ಟಾದ ಹಿರಿಯ ಪ್ರಾಥಮಿಕ ಶಾಲೆಯು ರಸ್ತೆಯ ಸಮೀಪದಲ್ಲೇ ಕಡಿದಾದ ಇಳಿಜಾರಿನಲ್ಲಿದೆ. ಈ ಶಾಲೆಯಲ್ಲಿ ಆರರಿಂದ ಎಂಟನೇ ತರಗತಿವರೆಗೆ ಒಂದುನೂರಾ ಐದು ಹೆಣ್ಣು ಮಕ್ಕಳು ಇದ್ದು, ಇವರಲ್ಲಿ ಅರುವತ್ತನಾಲ್ಕು ಮಕ್ಕಳು ಎಸ್‌ಸಿ/ಎಸ್‌ಟಿ ಹಾಗೂ ಮೂವತ್ತೆಂಟು ಮಂದಿ ಒಬಿಸಿ ಸಮುದಾಯಕ್ಕೆ ಸೇರಿದವರು. ಈ ಹೆಣ್ಣುಮಕ್ಕಳು ಇಲ್ಲಿ ಕಲಿಯಲು ಬಂದ ವಿಚಿತ್ರ ಸನ್ನಿವೇಶವನ್ನು ನಾವು ಇಲ್ಲಿನ ಮುಖ್ಯೋಪಾಧ್ಯಾಯಿನಿ ದುರ್ಗೇಶ್ ನಂದಿನಿ ಯಾದವ್ ಅವರಿಂದ ಕೇಳಿದಾಗ ಹತಾಶೆ ಮತ್ತು ಆಶಾಭಾವಗಳೆರಡೂ ಒತ್ತರಿಸಿ ಬಂದವು. ಡಾಮ್ಟಾದ ಸುತ್ತಮುತ್ತ 17 ಗ್ರಾಮಗಳಿದ್ದು,

ಗ್ರಾಮಸ್ಥರು ತಮ್ಮ ಗಂಡು ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳಿಸುತ್ತಾರೆ. ಬಾಲಕರು ಡಾಮ್ಟಾದಲ್ಲಿ ಕೊಠಡಿ ಮಾಡಿಕೊಂಡು ಉಳಿದುಕೊಳ್ಳುತ್ತಾರೆ. ಹೀಗಾಗಿ, ಅವರಿಗೆ ಅಡುಗೆ ಮಾಡುವುದೇ ಇತ್ಯಾದಿ ಸೇವೆಗಳನ್ನು ಮಾಡಲು ಪೋಷಕರು ಸೋದರಿಯರನ್ನು ಕಳಿಸುತ್ತಾರೆ. ಈ ಹುಡುಗಿಯರು ತಮ್ಮ ಶಾಲೆಗೆ ಸೇರುತ್ತಾರೆ. ಆದ್ದರಿಂದ, ಶಾಲೆಯನ್ನು ಈ ಬಾಲಕಿಯರ ಜೀವನವನ್ನೇ ಬದಲಿಸಿದ ಅನುಭವವನ್ನಾಗಿ ಮಾಡಬೇಕೆಂಬುದು ತಮ್ಮ ಹಾಗೂ ತಮ್ಮ ಸಹೋದ್ಯೋಗಿಗಳ ಪರಮಧ್ಯೇಯ ಎಂದು ಅವರು ಹೇಳಿದರು. ಈ ಕ್ರಿಯಾಶೀಲ ಮುಖ್ಯೋಪಾಧ್ಯಾಯಿನಿ ತಮ್ಮ ಧ್ಯೇಯವಾಕ್ಯವನ್ನು ಯಾಕೆ ಶಾಲೆಯ ಪ್ರಮುಖ ಸ್ಥಳದಲ್ಲಿ ಪ್ರಕಟಗೊಳಿದ್ದಾರೆ ಎನ್ನುವುದನ್ನು ಈ ಹಿನ್ನೆಲೆಯಲ್ಲಿ ಅರ್ಥ ಮಾಡಿಕೊಳ್ಳುವುದು ಸುಲಭ; "ಪಾಂಡಿತ್ಯ, ಕ್ರೀಡೆ, ಕಲೆ ಹಾಗೂ ಸಂಸ್ಕೃತಿಯ ಸಮತೋಲನದಿಂದ ಸರ್ವತೋಮುಖ ವಿಕಾಸ." ಎಂದು ಅಲ್ಲಿ ಬರೆಯಲಾಗಿದೆ.

ದುರ್ಗೇಶ್ ನಂದಿನಿ ಅವರ ಬದುಕು ಶಾಲೆಯಲ್ಲಿ ಓದುವ ಬಾಲಕಿಯರ ಸುತ್ತವೇ ಹೆಣೆದುಕೊಂಡಿದೆ. ಡಾಮ್ಟಾದ 'ಕನ್ಯಾ ಶಾಲೆಯನ್ನು ತೀರಾ ಇತ್ತೀಚೆಗೆ ಅಂದರೆ, 2011ರಲ್ಲಿ ಆರಂಭಿಸಿದ್ದು, ಪ್ರಾರಂಭದಿಂದಲೂ ದುರ್ಗೇಶ್ ನಂದಿನಿ ಇಲ್ಲಿ ಮುಖ್ಯ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದಾರೆ. ಅವರದೇ ಮಾತಿನಲ್ಲಿ ಹೇಳುವುದಾದರೆ, ಈ ಕೆಲಸ ಅವರ ಬದುಕಿಗೆ ನೂತನ ಗುರಿಯನ್ನೂ ಧ್ಯೇಯವನ್ನೂ ನೀಡಿದ ಎರಡನೇ ಅವಕಾಶವಾಗಿದೆ. ನಲವತ್ತರ ಮಧ್ಯವಯಸ್ಸು ದಾಟಿರುವ ಅವರು, ಬದುಕಿನಲ್ಲಿ ಸವಾಲುಗಳನ್ನು ಎದುರಿಸಿದವರು. ಆ ಬಗ್ಗೆ ಅವರು ಹೆಚ್ಚು ಮಾತನಾಡುವುದಿಲ್ಲ. ಆದರೆ, ಅವರ ಧೀರ ಮನಸ್ಸು ಕೆಲವು ಸಂಕಷ್ಟದ ಸಂದರ್ಭಗಳನ್ನು ಎದುರಿಸಲು ಸಹಾಯ ಮಾಡಿದೆ. ಎಂಎಸ್‌ಸಿ ಹಾಗೂ ಬಿಎಡ್ ಶಿಕ್ಷಣದ ಬಳಿಕ 20 ವರ್ಷಗಳ ಹಿಂದೆ ಶಿಕ್ಷಣ ಇಲಾಖೆಯನ್ನು ಸೇರಿದ ಅವರು, ನೌಗಾಂವ್‌ಬ್ಲಾಕ್‌ನ ರಿಖೌರಾ ಪ್ರಾಥಮಿಕ ಶಾಲೆಯಲ್ಲಿ ಹಲವು ವರ್ಷ ಕೆಲಸ ಮಾಡಿದರು. ಗುಡ್ಡಗಾಡಿನಲ್ಲಿ ಜನಿಸಿದವರಲ್ಲ, ಡೆಹ್ರಾಡೂನ್‌ನ ಹತ್ತಿರದವರು. ಹೆಣ್ಣುಮಕ್ಕಳ ಬಗ್ಗೆ ಹಾಗೂ ಅವರ ಶಿಕ್ಷಣದ ಬಗ್ಗೆ ಪಿತೃಪ್ರಧಾನ ಸಮಾಜದ ನಿರ್ಲಕ್ಷ್ಯವನ್ನು ನೋಡಿ ಕೋಪದಿಂದ ಕುದಿಯುತ್ತಿದ್ದ ದುರ್ಗೇಶ್ ನಂದಿನಿ ಇದೀಗ ತನ್ನ ಕೋಪವನ್ನು ಹೆಣ್ಣುಮಕ್ಕಳ ಬದುಕನ್ನು ಬೆಳಗಲು ಸಹಾಯ ಮಾಡುವ ಪ್ರೇರಕ ಶಕ್ತಿಯಾಗಿ ಮಾರ್ಪಡಿಸುವ ಜೀವಮಾನದ ಅತ್ಯುತ್ತಮ ಅವಕಾಶವನ್ನು ಗಳಿಸಿದ್ದಾರೆ. ಸದಾ ಹಸನ್ಮುಖಿಯಾಗಿರುವ ಅವರು ಆತ್ಮವಿಶ್ವಾಸಿಯೂ ಶಾಲೆಗೋಸ್ಕರ ಹಲವು ಯೋಜನೆಗಳನ್ನು ರೂಪಿಸಬಲ್ಲ ಕಲ್ಪನಾಶೀಲೆಯೂ ಆಗಿದ್ದಾರೆ, ಜೊತೆಗೆ ತಮ್ಮ ವ್ಯಕ್ತಿತ್ವದ ಪ್ರಭಾವದಿಂದ ತಮ್ಮ ಸನಿಹದ ಎಲ್ಲರನ್ನೂ ಉತ್ತಮ ಕಾರ್ಯಗಳಿಗೆ ಪ್ರೇರೇಪಿಸುವ ಗುಣವನ್ನೂ ಹೊಂದಿದ್ದಾರೆ.

ಡಾಮ್ಟಾ ಶಾಲೆಯ ಹನ್ನೆರಡರಿಂದ ಹದಿನಾಲ್ಕು ವರ್ಷ ವಯಸ್ಸಿನ ಈ ಬಾಲಕಿಯರು ಆತ್ಮವಿಶ್ವಾಸಿಗಳು. ನೇರ ನಡೆ–ನುಡಿಯವರು. ದುರ್ಗೇಶ್ ನಂದಿನಿ ತಮ್ಮ ಕಾಣ್ಕೆಯನ್ನು ಕ್ರಿಯೆಯಾಗಿ ಮಾರ್ಪಡಿಸುತ್ತಿದ್ದಾರೆ ಎಂಬುದು ಇವರ ಜೊತೆ ಸಂಭಾಷಣೆ ನಡೆಸಿದಾಗ ಅರಿವಾಗುತ್ತದೆ. ಅವರ ಸಹೋದ್ಯೋಗಿಗಳಾದ ಸವಿತಾ ಚಮೋಲಿ ಹಾಗೂ ಉಷಾಕಿರಣ್ ರಾವತ್ ಅವರ ಬೆಂಬಲದಿಂದ, ತರಗತಿ,

ಪಠ್ಯವಿಷಯಗಳು ಮತ್ತು ಇತರ ಚಟುವಟಿಕೆಗಳ ಸಮತೋಲನದ ಮೂಲಕ ಮಕ್ಕಳ ಸರ್ವತೋಮುಖ ವಿಕಾಸವನ್ನು ಖಾತ್ರಿಗೊಳಿಸಲು ಯತ್ನಿಸುತ್ತಿದ್ದಾರೆ. ಇದು ಅವರ ವಿದ್ಯಾರ್ಥಿಗಳ ಆತ್ಮವಿಶ್ವಾಸದಲ್ಲಿ, ಸಮಚಿತ್ತದಲ್ಲಿ ಹಾಗೂ ಬದುಕಿನ ಸಮಸ್ಯೆಗಳನ್ನು ಎದುರಿಸಿ, ಬಗೆಹರಿಸುವ ಸಾಮರ್ಥ್ಯದಲ್ಲಿ ಕಾಣಿಸಿಕೊಳ್ಳುತ್ತಿದೆ.

ವಿದ್ಯಾವಂತ ಕುಟುಂಬದವಳಾದ ತಾನು ಮನೆಯಲ್ಲಿ ಕಲಿಕೆಯನ್ನು ಉತ್ತೇಜಿಸುವ ವಾತಾವರಣವಿದ್ದುದರಿಂದ, ಓದುವುದು ಸಾಧ್ಯವಾಯಿತು; ಆದರೆ ಈ ಹೆಣ್ಣುಮಕ್ಕಳಿಗೆ ಅಂಥ ಅವಕಾಶವಿಲ್ಲ ಎನ್ನುವ ಎಚ್ಚರ ದುರ್ಗೇಶ್ ನಂದಿನಿ ಅವರ ಮನಸ್ಸಿನಲ್ಲಿ ಸದಾ ಮಿಡಿಯುತ್ತಿದೆ. ಇದರಿಂದಾಗಿಯೇ ಎಲ್ಲ 105 ಮಕ್ಕಳ ಮೇಲೆ ಅವರು ವೈಯಕ್ತಿಕ ಗಮನ ಇರಿಸಿದ್ದಾರೆ. ಪ್ರತಿ ದಿನ ಸಾಯಂಕಾಲ ಶಾಲೆ ಅವಧಿ ಮುಗಿದ ಬಳಿಕ ಮೂವರು ಶಿಕ್ಷಕಿಯರೂ ಗುರುತಿಸಿದ ಮಕ್ಕಳ ಜೊತೆ ಕಾಲ ಕಳೆದು, ಅವರ ವ್ಯಾಸಂಗಕ್ಕೆ ನೆರವಾಗುತ್ತಾರೆ. ಈ ಶಾಲೆಯ ಗಮನಾರ್ಹ ಬೋಧನಾಕ್ರಮಗಳಲ್ಲಿ– ಸ್ವಂತ ಪ್ರಬಂಧ ರಚನೆ, ಪದ್ಯಗಳ ರಚನೆ ಮೂಲಕ ಭಾಷೆ ಕಲಿಕೆಯನ್ನೂ ಭೂಗೋಳಶಾಸ್ತ್ರದ ತರಗತಿಯಲ್ಲಿ ಭೂಪಟವನ್ನು ಬಳಸುವ ಮೂಲಕ ಮಕ್ಕಳಲ್ಲಿ ದೃಶ್ಯ ಕಲಿಕೆ ಮತ್ತು ಸ್ಥಳ ಸಂಬಂಧಿ ಪರಿಕಲ್ಪನೆಯ ಅರಿವನ್ನೂ ಉತ್ತೇಜಿಸಲಾಗುತ್ತದೆ. ಇದನ್ನು ಪ್ರಾಯಶಃ ಬೇರೆ ಶಾಲಾ ಕೊಠಡಿಗಳಲ್ಲಿ ನೋಡಲು ಸಾಧ್ಯವಿಲ್ಲ.

ಇವರ ಸಹೋದ್ಯೋಗಿಗಳಾದ ಮೂವರು ಶಿಕ್ಷಕಿಯರು ಮಕ್ಕಳ ಶೈಕ್ಷಣಿಕ ಸಾಧನೆಗೆ ಸಂಪೂರ್ಣ ಗಮನ ನೀಡುವ ಜತೆಯಲ್ಲೇ, ಕ್ರೀಡೆ, ಸಾಹಿತ್ಯ ಹಾಗೂ ಲಲಿತ ಕಲೆಗಳಲ್ಲಿ ತಮ್ಮ ಆಸಕ್ತಿ ಹಾಗೂ ಸಾಮರ್ಥ್ಯವನ್ನು ಸಾಬೀತುಪಡಿಸಲು ನಾನಾ ಉಪಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ದುರ್ಗೇಶ್ ನಂದಿನಿ 'ಮನಸ್ಸು ಮತ್ತು ದೇಹ' ಎಂಬ ಮಾತನ್ನು ಪದೇಪದೇ ಬಳಸುವ ಮೂಲಕ ಇವು ಎರಡರ ಬೆಳವಣಿಗೆಯೂ ಆಗಬೇಕೆಂಬ ಸೂಚನೆಯನ್ನು ಮಕ್ಕಳಿಗೆ ನೀಡುತ್ತಾರೆ. ಶನಿವಾರವನ್ನು "ಓದಿಗೆ ರಜಾ ದಿನ" ಎಂದು ಘೋಷಿಸಿದ್ದು, ಆ ದಿನವನ್ನು ಕ್ರೀಡೆ, ಗಾಯನ, ಕಲೆ ಮತ್ತು ಚಿತ್ರ ಬಿಡಿಸುವಿಕೆಗೆ ಮೀಸಲಿಟ್ಟಿದ್ದಾರೆ. ಜೂಡೋ ಹಾಗೂ ಕರಾಟೆ ತರಬೇತಿದಾರರೊಬ್ಬರು ಇದ್ದಾರೆ ಎಂದು ತಿಳಿದು ಅವರ ಬೆನ್ನುಹತ್ತಿ ಶಾಲೆಯ ಬಾಲಕಿಯರಿಗೆ ಸಮರಕಲೆಯ ತರಬೇತಿ ನೀಡಲು ಒಪ್ಪಿಸಿದ್ದಾರೆ. ಕಬಡ್ಡಿ ತಂಡವೊಂದನ್ನು ಕಟ್ಟುವ ಗುರಿ ಇರಿಸಿಕೊಂಡರು. ಪ್ರತಿ ಮಗುವಿನಲ್ಲೂ ಪ್ರತಿಭೆ ಇರುತ್ತದೆ ಮಾತ್ರವಲ್ಲ, ಅದು ಬೇರೆ ಬೇರೆ ಆಗಿರುತ್ತದೆ ಎನ್ನುವುದು ಅವರ ಅಭಿಪ್ರಾಯ. ಆದ್ದರಿಂದ ಶಾಲೆಯಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಜೊತೆಗೆ ಜೂಡೋ, ಕರಾಟೆ ಮತ್ತು ಕಬಡ್ಡಿ ಏಕಕಾಲದಲ್ಲಿ ನಡೆಯುತ್ತಿದೆ. ದುರ್ಗೇಶ್ ಹಾಗೂ ಸಹೋದ್ಯೋಗಿಗಳು ಸ್ವಂತ ಹಣದಿಂದ ಲೇಜಿಂ ಸೆಟ್, ಡಂಬ್–ಬೆಲ್ಸ್ ಮತ್ತು ಜೂಡೋ ಸಮವಸ್ತ್ರ ಖರೀದಿ ಮಾಡಿದ್ದಾರೆ.

ಶಾಲೆಗೆ ಫ್ಯಾನ್, ಬೋಧನೆ–ಕಲಿಕೆ ಸಲಕರಣೆಗಳು ಇನ್ನಿತರ ವೆಚ್ಚಗಳನ್ನು ಭರಿಸಲು ಮೂವರೂ ಪ್ರತಿ ತಿಂಗಳು ರೂ.1,500 ವೆಚ್ಚ ಮಾಡುತ್ತಾರೆ. ಡಾಮ್ಟಾ ಕನ್ಯಾ ಒಂದು ಎಸ್‌ಎಸ್‌ಎ ಶಾಲೆಯಾಗಿದ್ದು, ಇದರಿಂದ ಶಿಕ್ಷಕರ ವೇತನ ಕೆಲವು ತಿಂಗಳು ವಿಳಂಬವಾಗಿ ಬರುವುದು ಸಾಮಾನ್ಯವಾಗಿದೆ. ಆದರೆ, ದುರ್ಗೇಶ್, ಸವಿತಾ ಹಾಗೂ

ಉಷಾಕಿರಣ್ ಇದನ್ನು ನಿಭಾಯಿಸಲು ಕಲಿತಿದ್ದಾರೆ. ವೇತನ ವಿಳಂಬ ಅವರ ಬದ್ಧತೆಯನ್ನು ಕುಗ್ಗಿಸಿಲ್ಲ.

ದುರ್ಗೇಶ್ ನಂದಿನಿ ಅವರಿಗೆ ಸಹೋದ್ಯೋಗಿ ಸವಿತಾ ಚಮೋಲಿ ಬಲಗೈ ಇದ್ದಂತೆ. ಸವಿತಾ ಕೂಡ ಶಾಲೆಯ ಆರಂಭದಿಂದಲೂ ಇದ್ದು, 1995ರಲ್ಲಿ ಶಿಕ್ಷಣ ಇಲಾಖೆ ಸೇರಿದ ಹಿರಿಯಾಕೆ. ಆಕೆಯ ಉತ್ಸಾಹ ಮಾತ್ರ ಎಣೆಯಿಲ್ಲದ್ದು. ಈ ಬಗ್ಗೆ ಅವರನ್ನು ಕೇಳಿದರೆ, ನಗುತ್ತಲೇ ಉತ್ತರ ಬರುತ್ತದೆ: "ನಾವು ಒಂದು ಕ್ಷಣ ಕೂಡ ಸೋಮಾರಿಯಾಗಿರಬಾರದು. ಮನಸ್ಸು ಯಾವಾಗಲೂ ಮಾಡಬೇಕಿರುವ ಕೆಲಸ, ಕಲಿಯಬೇಕಾದ ಹೊಸ ವಿಷಯಗಳ ಕಡೆಗೆ ಏಕಾಗ್ರವಾಗಿರಬೇಕು. ಈ ಹೆಣ್ಣು ಮಕ್ಕಳು ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ನನಗೆ ಗೊತ್ತಿಲ್ಲದ ವಿಷಯಗಳ ಕುರಿತೂ ಅವರು ಪ್ರಶ್ನೆ ಕೇಳಬೇಕು: ನಾನು ಓದಿಕೊಂಡು ಬಂದು ಅವರಿಗೆ ತಿಳಿಸಬೇಕಾದಂಥ ವಿಷಯ ಕುರಿತು ಕೇಳಬೇಕು ಎನ್ನುವುದು ನನ್ನ ಆಸೆ. ನಾನು ಕೆಲಸ ಮಾಡಿದ ಹಿಂದಿನ ಶಾಲೆಗೆ ಹೋಲಿಸಿದರೆ, ಈ ಶಾಲೆಯಲ್ಲಿ ಶಿಕ್ಷಕರ ನಡುವೆ ಪರಸ್ಪರ ನಂಬಿಕೆ ಮತ್ತು ಸ್ನೇಹ ಇದೆ. ಅದು ನನಗೆ ತುಂಬ ಇಷ್ಟದ ವಿಷಯ. ಈ ರೀತಿಯ ಪರಸ್ಪರ ನಂಬಿಕೆ ಅಪಾರ ಶಕ್ತಿಯನ್ನು ಸೃಷ್ಟಿಸುತ್ತದೆ, ಇಂತಹ ವಾತಾವರಣದಲ್ಲಿ ಎಷ್ಟು ಕೆಲಸ ಮಾಡಿದರೂ ಆಯಾಸ ಅಥವಾ ಬೇಸರ ಆಗುವುದಿಲ್ಲ."

ಡಾಮ್ಟಾದ 'ಭೋಜನ ಮಾತಾ'– ಶಾಲೆಯಲ್ಲಿ ಬಿಸಿಯೂಟ ಸಿದ್ಧಪಡಿಸಿ, ಬಡಿಸುವ ಮಹಿಳೆಯು ದುರ್ಗೇಶ್ ನಂದಿನಿ ಅವರ ತಂಡದ ಅವಿಭಾಜ್ಯ ಅಂಗವಾಗಿರುವುದು ಅವರು ಶಾಲೆಯ ಧ್ಯೇಯ–ಧೋರಣೆಗಳನ್ನೂ ನಾನಾ ಚಟುವಟಿಕೆಗಳನ್ನೂ ಸ್ಪಷ್ಟವಾಗಿ ವಿವರಿಸುತ್ತಿರುವಾಗಲೇ ನಿಚ್ಚಳವಾಯಿತು. ಬಿಸಿಯೂಟ ಸಿದ್ಧಪಡಿಸಿ, ಬಡಿಸುವ ಮಹಿಳೆಗೆ ಶಾಲೆಯ ದೈನಂದಿನ ಚಟುವಟಿಕೆ ಮಾತ್ರವಲ್ಲದೆ, ಉದ್ದೇಶ, ತತ್ವಾದರ್ಶ, ದೀರ್ಘಕಾಲೀನ ಧ್ಯೇಯವೇ ಮುಂತಾದ ಉನ್ನತ ವಿಚಾರಗಳ ಬಗ್ಗೆ ಇಂತಹ ಜ್ಞಾನವಿರುವುದು ಬಲು ಅಪರೂಪ ಎಂದೇ ಹೇಳಬಹುದು.

ಪ್ರೌಢಾವಸ್ಥೆಯ ಆರಂಭಿಕ ಹಂತದಲ್ಲಿರುವ ಈ ಮಕ್ಕಳು ತಮ್ಮ ಕುತೂಹಲ ಕೆರಳಿಸಿರುವ ಅಥವಾ ಆಸಕ್ತಿ ಇರುವ ಯಾವುದೇ, ಎಂತಹದ್ದೇ ಪ್ರಶ್ನೆಯನ್ನಾದರೂ ದುರ್ಗೇಶ್ ನಂದಿನಿ ಅವರಲ್ಲಿ ಕೇಳಬಹುದೆಂದು ಪ್ರೋತ್ಸಾಹಿಸಲಾಗಿತ್ತು. ಈ ಮಕ್ಕಳು ಈಗ ತಮ್ಮ ತಾಯಂದಿರ ಬಳಿ ಕೂಡ ಕೇಳಲು ಹಿಂಜರಿಯುವಂತಹ ಪ್ರಶ್ನೆಗಳನ್ನು ಶಿಕ್ಷಕಿಯರ ಬಳಿ ಕೇಳುತ್ತಾರೆ. "ಇವರು ಸಮುದಾಯ ಆರೋಗ್ಯ ಕೇಂದ್ರದ ವೈದ್ಯರನ್ನು ಯಾವುದೇ ಹಿಂಜರಿಕೆ ಇಲ್ಲದೆ ಭೇಟಿ ಮಾಡುತ್ತಾರೆ" ಎಂದು ಅವರು ಹೇಳಿದರು.

ವಿದ್ಯಾರ್ಥಿಗಳಲ್ಲಿ ನಾಯಕತ್ವವು ಸಹಜವಾಗಿ ಮೂಡಿಬರುತ್ತಿದೆ. ಆರೋಗ್ಯ ಮತ್ತು ವೈದ್ಯಕೀಯದಲ್ಲಿ ಆಸಕ್ತಿ ಇರುವ ವಿದ್ಯಾರ್ಥಿನಿಯು ಆರೋಗ್ಯ ದಾಖಲಾತಿ ಪುಸ್ತಕದ ನಿರ್ವಹಣೆಯ ಜವಾಬ್ದಾರಿ ವಹಿಸಿಕೊಂಡರೆ, ಕಬಡ್ಡಿ ಬಗ್ಗೆ ತಿಳಿದುಕೊಂಡ ಬಾಲಕಿಯರು ಶಾಲೆಯ ತಂಡಕ್ಕೆ ತರಬೇತಿ ನೀಡುತ್ತಾರೆ. ಡಾಮ್ಟಾ ಶಾಲೆಯ ಕಬಡ್ಡಿ ತಂಡ ಬ್ಲಾಕ್ ಹಾಗೂ ಜಿಲ್ಲಾ ಮಟ್ಟವನ್ನೂ ದಾಟಿ ರಾಜ್ಯ ಮಟ್ಟದಲ್ಲಿ ಪ್ರಶಸ್ತಿ ಪಡೆದಿದೆ. ರಾಷ್ಟ್ರ ಮಟ್ಟದಲ್ಲಿ ಉತ್ತರಾಖಂಡ್ ರಾಜ್ಯವನ್ನು ಈ ವಿದ್ಯಾರ್ಥಿಗಳು ಪ್ರತಿನಿಧಿಸಿದ್ದಾರೆ. ಬ್ಲಾಕ್, ಜಿಲ್ಲೆ, ಅಥವಾ ರಾಜ್ಯ ತಂಡದಲ್ಲಿ ಪಾಲ್ಗೊಂಡಿದ್ದ ಬಾಲಕಿಯರು ಮುಂದೆ ಬನ್ನಿ

ಎಂದಾಗ, 12ಕ್ಕೂ ಅಧಿಕ ಬಾಲಕಿಯರು ಮುಂದೆ ಬಂದರು. ಏರುತಗ್ಗಿನ, ಕಲ್ಲುಗಳಿಂದ ತುಂಬಿದ ಶಾಲೆಯ ಮೈದಾನದಲ್ಲಿ ಈ ಮಕ್ಕಳು ಪ್ರತಿದಿನ ಆಟವಾಡುತ್ತಾರೆ. "ಎಷ್ಟು ಜನರ ಮಂಡಿ ತರಚಿಹೋಗಿದೆ?" ಎನ್ನುವ ಪ್ರಶ್ನೆಗೆ ನಗುತ್ತ ಎಲ್ಲರೂ ಕೈಯೆತ್ತಿದರು!
